ಜ್ಯೋತಿರ್ಲಿಂಗದ ದರ್ಶಕ್ಕೆ ಹೊರಟೆವು. ಎಲ್ಲಾ ತೀರ್ಥಕ್ಷೇತ್ರದಂತೆ ಓಂಕಾರೇಶ್ವರವು ಕಾಣಿಸಿದರೂ, ಇಲ್ಲಿಯ ಸ್ವಚ್ಛ ಪಾರದರ್ಶಕ ನದಿ ನೀರು, ನದಿ ತೀರದ ಮೆಟ್ಟಿಲುಗಳು ಮನಸ್ಸಿಗೆ ಆಹ್ಲಾದವನ್ನುಂಟು ಮಾಡಿದವು. ದೋಣಿಯಲ್ಲಿ ನರ್ಮದಾ ಕಣಿವೆಯಲ್ಲಿ ಸಾಗುವಾಗ ಇಕ್ಕೆಲಗಳಲ್ಲಿ ಕಾಣುವ ಶಿಲಾಪದರಗಳು, ಗಟ್ಟಿಬಂಡೆಯನ್ನು ಕೆತ್ತಿ ಮಾಡಿರುವ ದೇವಸ್ಥಾನಗಳು, ಘಾಟ್‌ಗಳು ಹಾಗೂ ಮುಗಿಲೆತ್ತರಕ್ಕೆ ಆಕಾಶವನ್ನು ಚುಂಬಿಸುವ ಎರಡು ದೇವಾಲಯಗಳು, ಅರಮನೆಗಳು ಅವರ್ಣನೀಯ ಅನುಭವವನ್ನು ಕೊಡುತ್ತವೆ.

ಮೊದಲು ಬಲಭಾಗದಲ್ಲಿರುವ ಓಂಕಾರೇಶ್ವರಕ್ಕೆ ದೋಣಿ ತಲುಪಿತು. ಇಕ್ಕಟ್ಟಾದ ದಾರಿಯಲ್ಲಿ ಮೆಟ್ಟಿಲನ್ನು ಹತ್ತುತ್ತಾ ಪುರಾತನವಾದ ದೇವಾಲಯವನ್ನು ಪ್ರವೇಶಿಸಿದೆವು. ಈ ದೇವಸ್ಥಾನವನ್ನು ಎತ್ತರದ ಗುಡ್ಡದ ಇಳಿಜಾರಿನಲ್ಲಿ ಕಟ್ಟಲಾಗಿದೆ. ಕಂಭಗಳಲ್ಲಿರುವ ಕುಸುರಿ ಕೆಲಸಗಳು ಅದ್ಭುತ. ಸಾಲಿಗ್ರಾಮ ಶಿಲೆಯಲ್ಲಿ ಕೆತ್ತಲಾದ ಶಿವನ ಸುಂದರವಾದ ಲಿಂಗವನ್ನು ಸ್ಪರ್ಶಿಸಿ, ಇಲ್ಲಿಯ ಜೀವನಾಡಿಯಾದ ತಾಯಿ ಗೋದಾವರಿಯ ನೀರಿನ ಅಭಿಷೇಕ ಮಾಡಿ ಭಕ್ತಿಯಿಂದ ಕೈಮುಗಿದು ಪೂಜೆಯನ್ನು ಸಲ್ಲಿಸಿದೆವು.

ಓಂಕಾರೇಶ್ವರ ಹಾಗೂ ಮಾಮಲೇಶ್ವರ ಲಿಂಗಗಳು ನರ್ಮದಾ ನದಿಯ ತೀರದಲ್ಲಿ ಒಂದಕ್ಕೊಂದು ವಿರುದ್ಧ ದಿಕ್ಕಿನಲ್ಲಿದೆ. ಇವೆರಡನ್ನು ಒಟ್ಟಿಗೆ ಜ್ಯೋತಿರ್ಲಿಂಗವಾಗಿ ಪೂಜಿಸುತ್ತಾರೆ. ಪುರಾಣೇತಿಹಾಸದ ಪ್ರಕಾರ ಮಾಮಲೇಶ್ವರ ಲಿಂಗವು ಇಲ್ಲಿಯ ಮೂಲ ಜ್ಯೋತಿರ್ಲಿಂಗವಾಗಿ ಪೂಜಿಸಲ್ಪಡುತ್ತಿದೆ. ಪ್ರಯಾಗ, ವಾರಣಾಸಿಯಲ್ಲಿದ್ದಂತೆ ಇಲ್ಲೂ ಕೂಡ ಸಂಜೆ ಆರತಿಯಿದೆ. ಇದನ್ನು ಶಯನಾರತಿ ಎನ್ನುತ್ತಾರೆ. ಶಿವನು ಇಲ್ಲಿಗೆ ಪ್ರತಿದಿನ ರಾತ್ರಿ ಮಲಗಲು ಬರುತ್ತಾನೆಂಬ ನಂಬಿಕೆಯಿಂದ ರಾತ್ರಿ ವೇಳೆಯಲ್ಲಿ ಪ್ರತಿನಿತ್ಯ ಇಲ್ಲಿ ಶಯನಾರತಿಯನ್ನು ನಡೆಸುತ್ತಾರೆ.

ಇಲ್ಲಿಯ ನದಿ ದಂಡೆಯಲ್ಲಿ ಮಾರಾಟಕ್ಕೆ ಸಿಗುವ ಕೆಂಪು ಶಿಲೆಯ ಸಣ್ಣ ಸಣ್ಣ ಕಲ್ಲುಗಳು ಗಣೇಶನ ಮೂರ್ತಿಯೆಂದು ಪೂಜಿಸುತ್ತಾರೆ. ಇದರ ಮೂಲ ಬಿಹಾರ! ಇವನ್ನು ಶೋಣಭದ್ರಾ ಗಣಪತಿ ಎಂದು ಪಂಚಾಯತನ ಪೂಜೆಯಲ್ಲಿ ಪೂಜಿಸುತ್ತಾರೆ. ಹತ್ತು ರೂಪಾಯಿ ಕೊಟ್ಟು ಒಂದು ಗಣೇಶನ ಶಿಲೆಯನ್ನು (ನನ್ನ ಸ್ನೇಹಿತರು ತರಲು ಹೇಳಿದ್ದರಿಂದ) ಖರೀದಿಸಿದೆವು. ದೇವಸ್ಥಾನದಿಂದ ಇಳಿಯುವಾಗ ಎಡಭಾಗದಲ್ಲಿ ಒಂದು ಗುಹೆ ಸಿಗುತ್ತದೆ. ಈ ಗುಹೆಯಲ್ಲಿ ಆದಿಶಂಕರರು ತಮ್ಮ ಗುರುಗಳಾದ ಗೋವಿಂದಪಾದರಿಂದ ಉಪದೇಶವನ್ನು ಪಡೆಯುತ್ತಿರುವ ಮೂರ್ತಿಯನ್ನು ಕೆತ್ತಲಾಗಿದೆ. ಶಂಕರಾಚಾರ್ಯರು ಈ ಗುಹೆಯಲ್ಲಿಯೇ ತಮ್ಮ ಗುರು ಗೋವಿಂದಪಾದರನ್ನು ಭೆಟ್ಟಿಯಾಗುತ್ತಾರೆ. ಈ ಇಬ್ಬರ ಮಹಾ ಸಮಾಗಮನವನ್ನು ಇಲ್ಲಿಯ ಗುಹೆಯಲ್ಲಿ ಕೆತ್ತಲಾಗಿದೆ. ಗಣೇಶನ ಮೂರ್ತಿಯೂ ಅಲ್ಲಿದೆ.

ಓಂಕಾರದ ಆಕಾರದಲ್ಲಿರುವ ಈ ದ್ವೀಪವನ್ನು ಪರಿಕ್ರಮಿಸುವುದರಿಂದ ಹಾಗೂ ತಾಯಿ ಗೋದಾವರಿಯಲ್ಲಿ ಮುಳುಗೇಳುವುದರಿಂದ ಪುಣ್ಯ ಪ್ರಾಪ್ತಿಯಾಗುತ್ತದೆ ಎಂಬ ಭಾವನೆ ಭಕ್ತರಲ್ಲಿದೆ. ಸಮೀಪದ ಎರಡೂ ದಂಡೆಯಲ್ಲಿರುವ ದೇವಸ್ಥಾನಗಳಿಗೆ ಭೇಟಿ ಕೊಟ್ಟೆವು. ಅವುಗಳಲ್ಲಿ ಸಿದ್ದನಾಥ ದೇವಸ್ಥಾನ, ಗೌರಿ ಸಿದ್ದನಾಥ ದೇವಸ್ಥಾನ, ಕಾಜಲರಾಣಿ ಗುಹೆಗಳು, 24 ಅವತಾರಗಳು ಬಹು ಮುಖ್ಯ. ಇವೆಲ್ಲವೂ ತುಂಬಾ ಹಳೆಯ ದೇವಸ್ಥಾನಗಳು. ಈ ದ್ವೀಪವನ್ನು ಮಂದಾತಾ ದ್ವೀಪವೆಂದೂ ಕರೆಯುತ್ತಾರೆ. ಇಲ್ಲಿ ನರ್ಮದಾ ನದಿಗೆ ಸುಂದರವಾದ ಎತ್ತರವಾದ 270 ಅಡಿಗಳ ತೂಗುಸೇತುವೆಯನ್ನು ಕಟ್ಟಲಾಗಿದೆ. ಈ ಸೇತುವೆಯು ಪಾದಚಾರಿಗಳಿಗೆ ಎರಡೂ ದೇವಸ್ಥಾನಗಳಿಗೆ ಹೋಗಿಬರಲು ಕೊಂಡಿಯಾಗಿದೆ. ದೂರದಲ್ಲಿ ನರ್ಮದಾ ನದಿಗೆ ಕಟ್ಟಲಾದ ಅಣೆಕಟ್ಟೂ ಕೂಡಾ ದೋಣಿಯಲ್ಲಿ ಹೋಗುವಾಗ ಕಾಣಿಸುತ್ತದೆ. ನದಿಗಳು ಕೂಡುವ ಸ್ಥಳವು ನೊರೆ ನೊರೆಯಾಗಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಓಂಕಾರೇಶ್ವರನ ದರ್ಶನವನ್ನು ಮಾಡಿ, ಓಂಕಾರೇಶ್ವರ ಅರಮನೆಯನ್ನು ದೂರದಿಂದ ನೋಡಿ, ಎಡಭಾಗದಲ್ಲಿರುವ ಮಾಮಲೇಶ್ವರದ ದರ್ಶನಕ್ಕೆ ಹೊರಟೆವು. ಇಲ್ಲಿಯ ಸ್ವಚ್ಛನೀರಿನಲ್ಲಿ ಪಯಣಿಸುವುದೇ ಆಹ್ಲಾದಕರವಾಗಿತ್ತು. ಎರಡು ಗುಡ್ಡಗಳ ಕಣಿವೆಯಲ್ಲಿ ನಮ್ಮ ದೋಣಿ ಸಾಗುತ್ತಿತ್ತು. ದೋಣಿಯಿಂದ ಜಿಗಿದು ಮಾಮಲೇಶ್ವರನ ಪ್ರಾಂಗಣಕ್ಕೆ ಕಾಲಿಟ್ಟೆವು. ಇದೂ ಅತಿ ಪುರಾತನ ಕಟ್ಟಡ. ಇಲ್ಲಿ ದೇವಸ್ಥಾನಗಳನ್ನು ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದೆ. ಒಳಗೆ ಅತಿ ನಾಜೂಕಿನ ಕುಸುರಿ ಕೆತ್ತನೆಯಿದೆ. ಸಾಲಿಗ್ರಾಮ ಶಿಲೆಯ ಲಿಂಗದ ದರ್ಶನ, ಪೂಜೆ ಮಾಡಿ, ಅಲ್ಲಲ್ಲಿ ಕಾಣುತ್ತಿದ್ದ ಅತಿ ಪುರಾತನ ಮಂಟಪವನ್ನು ನೋಡಿದೆವು.


ವಿಂಧ್ಯಗಿರಿಯ ತಪ್ಪಲಿನ ಪ್ರದೇಶದಲ್ಲಿ ನಮ್ಮ ಕಾರು ಹೋಗುತ್ತಿರುವಾಗ ಸುತ್ತಲಿನ ಸೌಂದರ್ಯ ಆನಂದ ತಂದಿತು. ನಮ್ಮ ಮೊದಲ ದಿನದ ತೃಪ್ತಿಕರವಾಗಿತ್ತು. ನಮ್ಮ ಮುಂದಿನ ಪಯಣ ಉಜ್ಜಯಿನಿಗೆ ಹೊರಟಿತ್ತು. ಓಂಕಾರೇಶ್ವರದಲ್ಲಿ ಊಟ–ತಿಂಡಿಗೆ ಒಳ್ಳೆಯ ಹೋಟೆಲ್‌ಗಳು ಇಲ್ಲದ್ದರಿಂದ ನಮ್ಮ ಸಾರಥಿಯ ಆದೇಶದಂತೆ ಮಾರ್ಗ ಮಧ್ಯದಲ್ಲಿ ಸಿಕ್ಕ ಒಂದು ಉತ್ತಮ ಹೋಟೇಲಿನಲ್ಲಿ ಉತ್ತರಭಾರತದ ಊಟವನ್ನು ಮಾಡಿದೆವು.

ದಾರಿಯಲ್ಲಿ ಒಂದು ಸುಂದರವಾದ ಶನೀಶ್ವರ ದೇವಸ್ಥಾನಕ್ಕೆ ಭೇಟಿ ಕೊಟ್ಟೆವು. ಇಲ್ಲಿ ಶನೀಶ್ವರನನ್ನು ಯಮನ ರೂಪದಲ್ಲಿ ಪೂಜಿಸುತ್ತಾರೆ. ಎಲ್ಲಾ ನವಗ್ರಹಗಳೂ ಇಲ್ಲಿದ್ದವು. ಶನಿವಾರವಾದುದರಿಂದ ದೇವಸ್ಥಾನವು ಭಕ್ತಾದಿಗಳಿಂದ ತುಂಬಿತ್ತು. ಆದರೂ ದೇವರ ದರ್ಶನಕ್ಕೆ ತೊಂದರೆಯಾಗಲಿಲ್ಲ. ■

## ಹೋಗುವವರಿಗೆ ಕಿವಿಮಾತು

ವರ್ಷದ ಎಲ್ಲಾ ತಿಂಗಳಿನಲ್ಲೂ ಓಂಕಾರೇಶ್ವರಕ್ಕೆ ಹೋಗಬಹುದು. ಆದರೆ, ಅಕ್ಟೋಬರ್ ನವೆಂಬರ್ ಅಥವಾ ಫೆಬ್ರುವರಿ, ಮಾರ್ಚ್ ಒಳ್ಳೆಯ ಸಮಯ. ಆಗ ವಾತಾವರಣ ತಂಪಾಗಿರುತ್ತದೆ. ಬೆಂಗಳೂರಿನಿಂದ ಇಂದೋರಿಗೆ ವಿಮಾನದಲ್ಲಿ ಅಥವಾ ರೈಲಿನಲ್ಲಿ ಹೋಗಬಹುದು. ಕನಿಷ್ಠ ಒಂದೂವರೆ ತಿಂಗಳು ಮುಂಚಿತವಾಗಿ ಬುಕ್ ಮಾಡಿದರೆ ಒಳ್ಳೆಯದು. ಓಂಕಾರೇಶ್ವರದಲ್ಲಿ ಉಳಿಯಲು ಸಣ್ಣಪುಟ್ಟ ಹೋಟೆಲ್‌ಗಳಿವೆ. ಧರ್ಮಶಾಲೆಯೂ ಇದೆ. ದೇವಸ್ಥಾನದ ಪ್ರಾಂಗಣದಲ್ಲೂ ಮಲಗಬಹುದು. ಆದರೆ ಉತ್ತಮವೆಂದರೆ ಭಾರತದ ಅತಿ ಸ್ವಚ್ಛನಗರಿಯೆಂದು ಕರೆಯಲಾಗುವ, ಕೈಗೆಟಕುವ ಬೆಲೆಯಲ್ಲಿ ಒಳ್ಳೆಯ ರೂಂಗಳು ಸಿಗುವ ಇಂದೋರಿನಲ್ಲಿ ವಸತಿ ಮಾಡುವುದು, ಓಂಕಾರೇಶ್ವರಕ್ಕೆ ಟ್ಯಾಕ್ಸಿಯಲ್ಲಿ ಬಂದು ಹೋಗುವುದು ಒಳ್ಳೆಯದು. ಇಂದೋರಿನಿಂದ 65 ಕಿ.ಮೀ. ಉತ್ತರಕ್ಕೆ, ಉಜ್ಜಯನಿಗೂ ಹೋಗಿಬರಬಹುದು! (ಓಂಕಾರೇಶ್ವರ ದಕ್ಷಿಣಕ್ಕಿದ್ದು, ಓಂಕಾರೇಶ್ವರದಿಂದ ಉಜ್ಜಯನಿ ಸುಮಾರು 140 ಕಿ.ಮೀ. ದೂರದಲ್ಲಿದೆ).

ಹೋಗುವಾಗ ಸ್ವಲ್ಪ ತಿಂಡಿ, ನೀರು, ಟೊಪ್ಪಿ, ಇತ್ಯಾದಿ ಹೊಟ್ಟೆಗೆ ಬೇಕಾಗುವ ಪ್ರಥಮ ಚಿಕಿತ್ಸೆಯ ಸಾಮಗ್ರಿಗಳನ್ನು ಒಯ್ಯಲು ಮರೆಯಬೇಡಿ!



ಜ್ಯೋತಿರ್ಲಿಂಗ ಮಹಿಮೆಯ
ಓಂಕಾರೇಶ್ವರ ದೇಗುಲ